ಪ್ರತಿಬಿಂಬ

PRATIBIMBA – Multidisciplinary Kannada Research Journal of IIMRD
ISSN: 2582-2284
Vol-3 Issue 1, July-August, 150-157
©*IIMRD*, Mysuru

IIMRD JOURNALS
www.iimrd.com

# ಅಂಬೇಡ್ಕರ ಯುಗದ ಮಹಾನೇತಾರ ಶ್ರೀ ದೇವರಾಯ ಇಂಗಳೆ

**ಡಾ. ವಿದ್ಯಾ ಹಡಗಲಿ***

*ಸಹಾಯಕ ಪ್ರಾಧ್ಯಾಪಕರು, ಇತಿಹಾಸ ವಿಭಾಗ, ಸರಕಾರಿ ಪ್ರಥಮ ದರ್ಜೆ ಕಾಲೇಜು, ಸವದತ್ತಿ.

***ಸಾರಾಂಶ* (Abstract)**

*ಮಹಾರಾಷ್ಟ್ರದಲ್ಲಿ ಪ್ರಾರಂಭವಾದ ಬ್ರಾಹ್ಮಣೇತರ ಚಳುವಳಿಯ ಪ್ರಭಾವ ಮುಂಬೈ ಕರ್ನಾಟಕದ ಭಾಗವಾದ ಬೆಳಗಾವಿಯ ಮೇಲೂ ಆಗಿರುವುದನ್ನು ಗಮನಿಸುತ್ತೇವೆ. ಶಿಕ್ಷಣದಲ್ಲಿ ಹಿಂದುಳಿದ, ಮೌಢ್ಯಗಳಲ್ಲಿ ಮುಳುಗಿಹೋದ ತನ್ನ ಈ ಭಾಗದ ಜನರ ಜೀವನವನ್ನು ಸುಧಾರಿಸಬೇಕೆಂಬ ಕಾರಣಕ್ಕಾಗಿ ಕ್ರಾಂತಿಕಾರಿ ವಿಚಾರಧಾರೆಯ ಶ್ರೀ ದೇವರಾಯ ಇಂಗಳೆ ಅವರು ತಮ್ಮ ಜೀವನವನ್ನೇ ಮುಡುಪಾಗಿಟ್ಟಿದ್ದನ್ನು ಕಾಣುತ್ತೇವೆ. ಈ ಭಾಗದ ಜನರ ಶಿಕ್ಷಣ, ಆರೋಗ್ಯ, ವೈಚಾರಿಕ ಧೋರಣೆ ಹಾಗೂ ಸಾಮಾಜಿಕ ಜೀವನ ಮಟ್ಟದ ಬೆಳವಣಿಗೆಗೆ ಅಪಾರವಾಗಿ ಶ್ರಮಿಸಿ, ಬಹುತೇಕ ಅದರಲ್ಲಿ ಯಶಸ್ವಿಯೂ ಆದ ಶ್ರೀ ದೇವರಾಯ ಇಂಗಳೆಯವರು ಸದಾ ಸ್ಮರಣಾರ್ಹರು.*

***ಮುಖ್ಯಪದಗಳು* (Keywords):** ಬ್ರಾಹ್ಮಣೇತರ ಚಳುವಳಿ, ದಲಿತರು, ದೇವರಾಯ ಇಂಗಳೆ, ಪ್ರಯೋಗಗಳು, ಬದಲಾವಣೆ.

## ಪೀಠಿಕೆ

ಕ್ರಿ.ಶ. 1873 ರಲ್ಲಿ ಶ್ರೀ ಮಹಾತ್ಮಾ ಜ್ಯೋತಿರಾವ ಫುಲೆಯವರು 'ಸತ್ಯಶೋಧಕ ಸಮಾಜ' ಎಂಬ ಸಂಘಟನೆಯನ್ನು ಹುಟ್ಟು ಹಾಕಿ, ಬ್ರಾಹ್ಮಣೇತರರನ್ನು ಒಟ್ಟುಗೂಡಿಸಿ, ಸಾಮಾಜಿಕ ಕ್ರಾಂತಿಗೆ ಬುನಾದಿ ಹಾಕಿದರು. ಇವರ ಸಾಮಾಜಿಕ ಧಾರ್ಮಿಕ ಚಳುವಳಿಗಳ ಉದ್ದೇಶ ಬ್ರಾಹ್ಮಣ ಅಧಿಪತ್ಯದ ವಿರುದ್ಧವಾಗಿ ದಲಿತರಿಗೆ ಹಾಗೂ ಇತರ ಹಿಂದುಳಿದ ಜಾತಿಗಳಿಗೆ ಪರ್ಯಾಯ ಶೈಕ್ಷಣಿಕ, ಧಾರ್ಮಿಕ ಮತ್ತು ಸಾಮಾಜಿಕ ವ್ಯವಸ್ಥೆ ಒದಗಿಸಿಕೊಡುವುದಾಗಿತ್ತು. ಆ ಹಂತದಲ್ಲಿ ಈ ಚಳುವಳಿಗಳು ಯಶಸ್ವಿಯಾದವೆಂದೇ ಹೇಳಬೇಕು. ಈ ಚಳುವಳಿಯಿಂದ ಪ್ರೇರಣೆಗೊಂಡ ಕೊಲ್ಹಾಪುರದ **'ಶಾಹೂ'** ಮಹಾರಾಜರು ಸಹ ಕ್ರಿ.ಶ. 1912 ರಿಂದ ಬ್ರಾಹ್ಮಣೇತರ ಚಳುವಳಿಯ ನೇತೃತ್ವ ವಹಿಸಿದರು. ಕ್ರಿ.ಶ. 1920 ರ ದಶಕದವರೆಗೆ ಮಹಾರಾಷ್ಟ್ರದಲ್ಲಿ ದಲಿತರು ಬ್ರಾಹ್ಮಣೇತರ ಚಳುವಳಿಯ ಅಡಿಯಲ್ಲಿ ಸೇರಿಕೊಂಡಿದ್ದರಲ್ಲದೇ ಆ ಚಳುವಳಿಯಿಂದ ಪ್ರಭಾವಿತರಾಗಿದ್ದರೆಂದೂ ಹೇಳಬಹುದು.

ಇಂತಹ ಸಂಕ್ರಮಣ ಪರಿಸ್ಥಿತಿಯಲ್ಲಿ ಕೊಲ್ಹಾಪುರಕ್ಕೆ ಸಮೀಪವಾದ ಬೆಳಗಾವಿ ಜಿಲ್ಲೆಯ ಚಿಕ್ಕೋಡಿ ತಾಲೂಕಿನ ಇಂಗಳಿ ಗ್ರಾಮದಲ್ಲಿ ಶ್ರೀ ದೇವರಾಯ ಇಂಗಳೆಯವರು ಕ್ರಿ.ಶ. 1889 ಜುಲೈ ತಿಂಗಳಿನಲ್ಲಿ ಜನಿಸಿದರು. ತಂದೆ ರಾಮರಾಯ. ದೇವರಾಯರು ಬಡತನದಲ್ಲಿಯೇ ಬೆಳೆಯಬೇಕಾಯಿತು. ಕೊಲ್ಹಾಪುರದ

*Please cite this article as:* *ವಿದ್ಯಾ ಹಡಗಲಿ. (2021).* ಅಂಬೇಡ್ಕರ ಯುಗದ ಮಹಾನೇತಾರ ಶ್ರೀ ದೇವರಾಯ ಇಂಗಳೆ. *ಪ್ರತಿಬಿಂಬ: ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 3(1). ಪು.ಸಂ. 150–157*

ಸುಧಾರಣೆಯ ಗಾಳಿ ಇಂಗಳಿಗೂ ಬೀಸಿತ್ತು. ಕುಶಾಗ್ರಮತಿಗಳಾದ ದೇವರಾಯರು 5ನೆಯ ಇಯತ್ತೆಯನ್ನು ಇಂಗಳಿಯಲ್ಲಿ, ಮುಂದಿನ ಶಿಕ್ಷಣವನ್ನು ಸಾಕಷ್ಟು ಅಡೆತಡೆಗಳ ಮಧ್ಯ ಕೊಲ್ಹಾಪುರದಲ್ಲಿ ಪೂರೈಸಿದರು. ಕೊಲ್ಹಾಪುರದಲ್ಲಿದ್ದಾಗ ದೇವರಾಯರು ಮರಾಠಿ, ಹಿಂದಿ ಹಾಗೂ ಇಂಗ್ಲಿಷ್ ಭಾಷೆಗಳನ್ನು ಅರಗಿಸಿಕೊಂಡಿದ್ದರು.

ಈ ಸಂದರ್ಭದಲ್ಲಿ ದೇವರಾಯರು ಇಡೀ ಬೆಳಗಾವಿ ಜಿಲ್ಲೆ ಮತ್ತು ದಕ್ಷಿಣ ಮಹಾರಾಷ್ಟ್ರ ಪ್ರದೇಶಗಳಲ್ಲಿ ಅಡ್ಡಾಡಿ ದಲಿತರ ಅಸಹನೀಯವಾದ ಬದುಕನ್ನು ಕಣ್ಣಾರೆ ಕಂಡರು ಹಾಗೂ ಅನುಭವಿಸಿದ್ದರು ಕೂಡ. ಅಷ್ಟೊತ್ತಿಗಾಗಲೇ ಮಹಾರಾಷ್ಟ್ರದಲ್ಲಿ ಡಾ. ಬಾಬಾಸಾಹೇಬ ಅಂಬೇಡ್ಕರ ಧ್ವನಿ ಮೊಳಗಲಾರಂಭಿಸಿತ್ತು. ಕುಶಲಮತಿಯಾದ ಅಂಬೇಡ್ಕರರ ವೈಚಾರಿಕ ವಿಚಾರಗಳು ದಂತಕಥೆಗಳಾಗಿ ದಲಿತಕೇರಿಗಳಲ್ಲಿ ಪ್ರವೇಶಿಲಾರಂಭಿಸಿದ್ದವು. ದೇವರಾಯರು ಬಾಬಾಸಾಹೇಬರಿಗಿಂತ ಎರಡು ವರ್ಷ ದೊಡ್ಡವರು. ಅಂಬೇಡ್ಕರರಲ್ಲಿ ಅವರು ದಲಿತರ ನೋವಿನ ಮುಕ್ತಿಯನ್ನು ಕಂಡರು. ಅಂಬೇಡ್ಕರರು ಮಾತ್ರ ಜ್ಯೋತಿಬಾ ಫುಲೆಯವರ ಆದರ್ಶ ಮತ್ತು ವೈಚಾರಿಕತೆಗಳನ್ನು ಮುಂದುವರೆಸಬಲ್ಲರೆಂಬ ಸತ್ಯದ ಅರಿವು ಅವರಿಗಾಯಿತು. ದೇವರಾಯರು ತಮ್ಮ ಮನಸ್ಸಿನ ತುಮುಲಗಳನ್ನು ಅಂಬೇಡ್ಕರರವರಿಗೆ ಪತ್ರ ಬರೆದು ತಿಳಿಸಿದರು. ದಲಿತರ ಬಗ್ಗೆ ಏನಾದರೂ ಮಾಡಬೇಕೆಂಬ ಅಚಲ ನಿರ್ಧಾರದವರಾಗಿದ್ದು, ದಲಿತರ ಅವನತಿಗೆ ಅವರ ಅಜ್ಞಾನ, ನಿರಕ್ಷರತೆ, ಬಡತನ, ಮೂಢನಂಬಿಕೆ ಹಾಗೂ ಹಿಂದೂ ಧರ್ಮದಲ್ಲಿರುವ ಕಟ್ಟಳೆಗಳೆಂದು ಅರಿತವರಾಗಿದ್ದು, ಈ ವಿಷಯಗಳ ಬಗ್ಗೆ ಅವರು ದೇವರಾಯರ ಜೊತೆಗೆ ಮುಕ್ತವಾಗಿ ಚರ್ಚಿಸಿದರು.

ಅಷ್ಟರಲ್ಲಿ ನಿಪ್ಪಾಣಿ, ಚಿಕ್ಕೋಡಿ ಭಾಗಗಳಲ್ಲಿ ದತ್ತಾಕಟ್ಟಿ, ಬಲವಂತರಾವ ವರಾಳೆ, ಚಂಪಾಬಾಯಿ ಭೋಗಲೆ, ಪಿ.ಪಿ.ಹೆಗ್ರೆ, ಭವಾನೆ ಮುಂತಾದ ಹೊಸ ವಿಚಾರದ ದಲಿತ ಯುವಕ ಯುವತಿಯರು ಅಂಬೇಡ್ಕರ–ಫುಲೆ ವಿಚಾರಗಳಿಂದ ಪ್ರಚೋದಿತರಾಗಿ ದೇವರಾಯರು ಡಾ. ಅಂಬೇಡ್ಕರ ಜೊತೆಗೆ ನೇರವಾಗಿ ಸಂಪರ್ಕ ಇಟ್ಟುಕೊಂಡಿದ್ದನ್ನು ಅರಿತು, ದೇವರಾಯರ ಹೋರಾಟಕ್ಕೆ ಬೆನ್ನೆಲುಬಾಗಿ ನಿಲ್ಲಲು ನಿರ್ಧರಿಸಿದರು. ಇದರಿಂದ ದೇವರಾಯರಿಗೂ ಸಹಾಯವಾಯಿತು.

**ಶ್ರೀ ದೇವರಾಯ ಇಂಗಳೆಯವರ ಹೋರಾಟ ಮತ್ತು ಸಾಧನೆ**

ಕ್ರಿ.ಶ. 1920 ರಿಂದ ಬೆಳಗಾವಿ ಪ್ರದೇಶದಲ್ಲಿ ಪ್ರಾರಂಭವಾದ ದೇವರಾಯ ಇಂಗಳೆಯವರ ವೈಯಕ್ತಿಕ ದಲಿತ ಚಳುವಳಿಗೆ ನಂತರದಲ್ಲಿ ಬಾಬಾಸಾಹೇಬ ಅಂಬೇಡ್ಕರರವರ ಮಾರ್ಗದರ್ಶನವೂ ಲಭ್ಯವಾಯಿತು. ಮುಂದೆ ಜ್ಯೋತಿರಾವ ಫುಲೇ ಹಾಗೂ ಶಾಹು ಮಹಾರಾಜರು ನಡೆದ ಮಾರ್ಗಗಳು, ಹಿಂದೆ ಅಂಬೇಡ್ಕರರವರ ಮಾರ್ಗದರ್ಶನ, ಜೊತೆಗೆ ಚಳುವಳಿಯಲ್ಲಿ ಸಹಕರಿಸಲು ಸ್ನೇಹಿತರು ಹಾಗೂ ಅನುಯಾಯಿಗಳು ಈ ಎಲ್ಲ ಅಂಶಗಳು ದೇವರಾಯರ ಬದುಕಿಗೆ ನಿಶ್ಚಿತ ಗುರಿ, ಉದ್ದೇಶಗಳನ್ನು ಕೊಡಮಾಡಿದ್ದವು. ಶ್ರೀ ದೇವರಾಯ ಇಂಗಳೆಯವರು ಜಾತಿವಾಚಕ ಅಡ್ಡಹೆಸರಿನ ನಿರ್ಮೂಲನೆ, ದೇವದಾಸಿ ಪದ್ಧತಿಯ ನಿರ್ಮೂಲನೆ, ಸತ್ತ ದನಗಳ ಮಾಂಸ ಭಕ್ಷಣೆಯ ನಿರ್ಮೂಲನೆ, ಅಸ್ಪೃಶ್ಯತಾ ಆಚರಣೆಯ ವಿರುದ್ಧದ ಹೋರಾಟ ಮುಂತಾದ ಸಾಮಾಜಿಕ ಚಳುವಳಿ ಮಾತ್ರವಲ್ಲದೆ, ಶೈಕ್ಷಣಿಕ, ಆರ್ಥಿಕ ,ಧಾರ್ಮಿಕ ಮತ್ತು ರಾಜಕೀಯ ಚಳುವಳಿಗಳಲ್ಲೂ ಮಹತ್ವದ ಪಾತ್ರವಹಿಸಿದರು.

ಸರಜೂ ಕಾಟ್ಕರ್ (2002) ರವರು ತಮ್ಮ ಕೃತಿಯಲ್ಲಿ "ಬೆಳಗಾವಿ ಜಿಲ್ಲೆಯ ದಲಿತರಿಗೂ, ಬೇರೆ ಜಿಲ್ಲೆಗಳ ದಲಿತರಿಗೂ ಒಂದು ಮೂಲಭೂತವಾದ ವ್ಯತ್ಯಾಸವನ್ನು ಬೆಳಗಾವಿಗೆ ಬಂದಂದಿನಿಂದಲೂ ಗಮನಿಸಿದ್ದೆ. ಇಲ್ಲಿಯ ದಲಿತರು ಶೈಕ್ಷಣಿಕವಾಗಿ, ರಾಜಕೀಯವಾಗಿ, ಆರ್ಥಿಕವಾಗಿ ಹಾಗೂ ಸಾಮಾಜಿಕವಾಗಿ ಉಚ್ಚಸ್ತರದಲ್ಲಿದ್ದವರು. ಇಲ್ಲಿಯ ದಲಿತರ ಅಡ್ಡ ಹೆಸರುಗಳೂ ಮೇಲ್ವರ್ಗದವರ ಅಡ್ಡ ಹೆಸರುಗಳನ್ನು ಹೋಲುತ್ತಿದ್ದುದನ್ನು ಗಮನಿಸುವಂತಹ ಅಚ್ಚರಿಯ ಸಂಗತಿ. ಈ ಕ್ರಾಂತಿಗೆ ಕಾರಣರಾದವರು ದೇವರಾಯ ಇಂಗಳೆ" ಎಂದು ಉಲ್ಲೇಖಿಸಿರುವುದು ಅವರ ಸಾಮಾಜಿಕ ಹೋರಾಟದ ಸಾಧನೆಯನ್ನು ಬಿಂಬಿಸುತ್ತದೆ. ಜನರು ಅಡ್ಡ ಹೆಸರಿಗೂ ಜಾತಿಗೂ ಸಂಬಂಧ ಏರ್ಪಡಿಸಿ ಆಯಾ ರೀತಿಯಲ್ಲಿ ವರ್ತಿಸುತ್ತಾರೆಂಬ ಸತ್ಯ ದೇವರಾಯರ ಅನುಭವಕ್ಕೆ ಬಂದಿತೋ ಆಗ ಅದಕ್ಕೆ ಏನಾದರೂ ಉಪಾಯ ಕಂಡು ಹಿಡಿಯಲೇಬೇಕೆಂದು ಯೋಚಿಸಿ, ಅದಕ್ಕೆ ಸರಿಯಾಗಿ ದಲಿತರು ತಮ್ಮ ಈ ಹಿಂದಿನ ಜಾತಿಸೂಚಕ ಅಡ್ಡ ಹೆಸರುಗಳ ಬದಲಿಯಾಗಿ, ತಮ್ಮ ಹುಟ್ಟು ಊರುಗಳ, ತಾವು ಕೆಲಸ ಮಾಡುವ ಮಾಲೀಕರ ಹೆಸರುಗಳನ್ನು ಅಡ್ಡಹೆಸರುಗಳಾಗಿ ತಮಗಂಟಿಸಿಕೊಂಡರು. ಈ ಎಲ್ಲ ಅಡ್ಡ ಹೆಸರುಗಳು ಸವರ್ಣೀಯರದ್ದಾಗಿದ್ದವು. ಉದಾ: ರಾಯಬಾಗಕರ್, ಮಿರಜಕರ್, ಚಿಂಚಲಿಕರ, ಕೊಲ್ಲಾಪುರೆ, ಸಾಂಗ್ಲೀಕರ್, ಮಾನೆ, ಚೌಗುಲೆ, ಕಾಮತ, ಜೋಶಿ, ಪಾಟೀಲ್, ಭವಾನೆ, ಸೂರ್ಯವಂಶಿ, ಇನಾಂದಾರ, ರಾಯನಾಕ, ತಾಮನಾಕ, ಧಾಮನಾಕ, ಮೇಘನಾಕ, ಶೆಟ್ನಾಕ ಇತ್ಯಾದಿ.

ದೇವದಾಸಿ ಪದ್ಧತಿ ಆಗ ವ್ಯಾಪಕವಾಗಿ ಬಳಕೆಯಲ್ಲಿತ್ತು. ಸವದತ್ತಿ ಎಲ್ಲಮ್ಮಳಿಗೆ ಮಗಳನ್ನು ದೇವದಾಸಿ ಬಿಟ್ಟರೆ ಅದರಿಂದ ದೇವಿ ಸಂತುಷ್ಟಳಾಗುತ್ತಾಳೆಂದು ದಲಿತರು ಭಾವಿಸಿದ್ದರು. ದೇವದಾಸಿಯರಿಗೆ ಸಮಾಜದಲ್ಲಿ ಯಾವ ಗೌರವ ಮನ್ನಣೆಯೂ ಇರಲಿಲ್ಲ. ಇಳಿವಯಸ್ಸಿನಲ್ಲಿ ಹುಚ್ಚಿಯರಾಗಿ ಅಥವಾ ಅನೇಕ ರೋಗಗಳಿಗೆ ಬಲಿಯಾಗುತ್ತಿದ್ದರು. ಇಂಥ ಪದ್ಧತಿಯನ್ನು ನಿರ್ಮೂಲನೆ ಮಾಡಲು ಪ್ರಯತ್ನಿಸಿ, ಜನರಿಗೆ ಮನಮುಟ್ಟುವ ಹಾಗೆ ತಿಳಿಸಿ ಹೇಳಿದರು. ಅವರ ಪ್ರಯತ್ನದ ಫಲವಾಗಿ ಮುಂದಿನ ದಿನಗಳಲ್ಲಿ ದಲಿತರ ಜೀವನ ಕ್ರಮದಲ್ಲಿ ಮಹತ್ತರ ಬದಲಾವಣೆಗಳಾದವು. ದೇವದಾಸಿ ಪದ್ಧತಿ ನಿರ್ಮೂಲನೆ ಕಾಯ್ದೆ ಜಾರಿಯಾಗುವುದಕ್ಕಿಂತ ಅನೇಕ ವರ್ಷಗಳ ಮೊದಲೇ ಅವರು ಆ ಪದ್ಧತಿಯ ವಿರುದ್ಧ ಯುದ್ಧ ಹೂಡಿದ್ದರು.

ದಲಿತರು ಸತ್ತ ದನದ ಮಾಂಸವನ್ನು ತಿನ್ನುವುದು ಆಗ ವ್ಯಾಪಕವಾಗಿ ಬಳಕೆಯಲ್ಲಿತ್ತು. ಇದರಿಂದ ಅಸಾಧ್ಯವಾದ ರೋಗ ರುಜಿನಗಳು ಬರುವ ಸಂಭವವನ್ನು ದೇವರಾಯರು ಮನಗಂಡಿದ್ದರು. ದೇವರಾಯರು ಈ ಸಮಸ್ಯೆಯನ್ನು ತಮ್ಮ ಚಳುವಳಿಯ ಮುಂದಿನ ಹೆಜ್ಜೆಯಾಗಿ ತೆಗೆದುಕೊಳ್ಳಬೇಕೆಂದು ನಿರ್ಧರಿಸಿ, 'ಭಾರತೀಯ ಬಹಿಷ್ಕೃತ ಸಮಾಜ' ಸಂಸ್ಥೆಯಿಂದ ಈ ಚಳುವಳಿಯನ್ನು ಕೈಗೆತ್ತಿಕೊಂಡರು. ದೇವರಾಯರು ಹಾಗೂ ಅವರ ಗೆಳೆಯರು ಊರೂರಿಗೆ ಅಡ್ಡಾಡಿ ಸತ್ತದನದ ಮಾಂಸ ತಿನ್ನುವುದರಿಂದ ಆಗುವ ಅನಾರೋಗ್ಯದ ಬಗ್ಗೆ ಜನರಿಗೆ ತಿಳುವಳಿಕೆಯನ್ನು ನೀಡಲು ಪ್ರಯತ್ನಿಸಿದರು. ಕೆಲವರಿಗೆ ಅದು ಅರ್ಥವಾಯಿತು. ಇನ್ನೂ ಹಲವರಿಗೆ ಅವರ ವಿಚಾರ ಅಪಥ್ಯವಾಯಿತು. ಆರಂಭದಲ್ಲಿ ಅದನ್ನು ವಿರೋಧಿಸಿದ ದಲಿತರು ನಂತರ ಅವರ ಕಳಕಳಿಯನ್ನು ಅರ್ಥ ಮಾಡಿಕೊಂಡರು. ದೇವರಾಯರ ನಡೆ ಹಾಗೂ ನುಡಿ ಜನರ ಮೇಲೆ ಮಾಂತ್ರಿಕ ಶಕ್ತಿ ಬೀರುತ್ತಿದ್ದವು. ಹಲವಾರು ಬಾರಿ ದೇವರಾಯರು ಜನರಿಗೆ

ಬಾಬಾಸಾಹೇಬರ ಹೆಸರಿನಲ್ಲಿ ಆಣೆ ಮಾಡಿಸಿದ್ದೂ ಉಂಟು. ಬರಬರುತ್ತ ಎಲ್ಲ ಊರುಗಳಲ್ಲಿ ದಲಿತರು ಸತ್ತದನದ ಮಾಂಸ ಸೇವನೆಯನ್ನು ಪೂರ್ತಿಯಾಗಿ ಬಿಟ್ಟುಬಿಟ್ಟರು.

ದಲಿತ ಚಳುವಳಿಗಳಲ್ಲಿ ಪ್ರಥಮ ಹಂತದಲ್ಲಿ ಪ್ರಭಾವ ಬೀರಿದ ಅಂಶವೆಂದರೆ ಸಾಮಾಜಿಕ, ಧಾರ್ಮಿಕ ಸುಧಾರಣೆಯ ಅಂಶ. ದಲಿತ ಚಳುವಳಿಯ ಮುಖ್ಯ ಉದ್ದೇಶವೆಂದರೆ ಅಸ್ಪೃಶ್ಯರ ಜೀವನ ವಿಧಾನವನ್ನು ಬದಲಿಸುವ ಕುರಿತದ್ದು. ಮಹಾತ್ಮಾ ಫುಲೆ ಕಾಲದಿಂದ ಇಲ್ಲಿಯವರೆಗೆ ಕೆಲವು ಸವರ್ಣೀಯ ಸಮಾಜ ಸುಧಾರಕರು ದಲಿತರ ಕೇರಿಗಳಿಗೆ ಹೋಗುವುದು ಪ್ರಾರಂಭವಾಯಿತು. ಬ್ರಿಟಿಷ್ ಆಡಳಿತ ಮತ್ತು ಫುಲೆ ಚಳುವಳಿಯ ಪ್ರತಿಫಲವಾಗಿ ಅಲ್ಪಸ್ವಲ್ಪ ವಿದ್ಯೆ ಪಡೆದ ದಲಿತರು ತಮ್ಮ ಸಮಾಜ ಪರಿವರ್ತನೆಗೆ ಪ್ರೇರಣೆ ಪಡೆದರು. ದಲಿತ ಕೇರಿಗಳು ಅಸ್ವಚ್ಛತೆಯ ಆಗರವಾಗಿದ್ದವು. ಹೀಗಾಗಿ ದೇವರಾಯರು ಅಲ್ಲಿದ್ದ ಜನರಿಗೆ ಸ್ವಚ್ಛತೆಯ ಮಹತ್ವ ತಿಳಿಹೇಳಿದರು. ಪ್ರತಿದಿನ ಸ್ನಾನ ಮಾಡಬೇಕೆಂದು, ತಿನ್ನುವಲ್ಲಿ ಮತ್ತು ಉಡುವಲ್ಲಿ ಒಂದು ಶಿಸ್ತು ಪಾಲಿಸಬೇಕೆಂದೂ ಹೇಳಿದರು. ಮೂಢನಂಬಿಕೆಗಳಲ್ಲಿ ನಂಬಿಕೆಯನ್ನು ಇಡಕೂಡದೆಂದು ಅವರಿಗೆ ಮನವರಿಕೆ ಮಾಡಿಕೊಟ್ಟರು.

**ಶೈಕ್ಷಣಿಕ ಸುಧಾರಣಾ ಚಳುವಳಿಗಳು ಹಾಗೂ ವೈಯಕ್ತಿಕ ಸಾಧನೆಗಳು**

'ಶಿಕ್ಷಣವಿಲ್ಲದ್ದರಿಂದ ಮನುಷ್ಯರಾಗಿದ್ದ ದಲಿತರು ಪಶುಗಳಾದರು' ಎಂದು ಫುಲೆಯವರು ಹೇಳಿ ದಲಿತರೆಲ್ಲರೂ ಅಗತ್ಯವಾಗಿ ಶಿಕ್ಷಣ ಕಲಿಯಬೇಕೆಂದು ಆಗ್ರಹಿಸಿದ್ದರು. ಅಂಬೇಡ್ಕರರಂತೂ ಅನಕ್ಷರತೆಯ ವಿರುದ್ಧ ಯುದ್ಧವನ್ನೇ ಹೂಡಿದರು. ಅಂಬೇಡ್ಕರರ ಕನಸನ್ನು ತಮ್ಮ ಪರಿಸರದಲ್ಲಿ ಸಾಕಾರಗೊಳಿಸಲು ದೇವರಾಯರು ನಿರ್ಧರಿಸಿದರು. ಆರಂಭಿಕ ಹಂತದಲ್ಲಿ ಕಾರದಗಾ, ನಿಪ್ಪಾಣಿ ಮತ್ತು ಚಿಕ್ಕೋಡಿಯಲ್ಲಿ ಬೋರ್ಡಿಂಗ್ ಶಾಲೆಗಳನ್ನು ಆರಂಭಿಸಿದರು. ಈ ಶಾಲೆಗಳಲ್ಲಿ ಮಕ್ಕಳನ್ನು ಸೇರಿಸಲು ಊರೂರು ಅಲೆದು, ಜನರಿಗೆ ಶಿಕ್ಷಣದ ಮಹತ್ವವನ್ನು ತಿಳಿಹೇಳಿದರು. ಬೆಳಗಾವಿಯ ಆರ್.ಟಿ.ಓ. ಕಛೇರಿ ಹಾಗೂ ಬೆಳಗಾವಿ ಗೋವಾವೇಸ್ ಬಳಿ ಹುಡುಗಿಯರಿಗಾಗಿಯೇ ಬೋರ್ಡಿಂಗ್ ಶಾಲೆಗಳನ್ನು ಪ್ರಾರಂಭಿಸಿದರು. ಒಂದೆರಡು ವರ್ಷ ಸ್ವತಃ ದೇವರಾಯರೇ ಶಿಕ್ಷಕರಾಗಿ ದುಡಿದದ್ದೂ ಉಂಟು. ದೇವರಾಯರ ಒತ್ತಾಸೆಯ ಪ್ರಯತ್ನದಿಂದ ದಲಿತರಿಗಾಗಿಯೇ ಅಲ್ಲಲ್ಲಿ ಶಾಲೆಗಳು ಆರಂಭವಾದವು. ಈ ಶಾಲೆಗಳ ಉಸ್ತುವಾರಿ ದಲಿತರ ಕೈಯಲ್ಲಿಯೇ ಇರಬೇಕೆಂದು ದೇವರಾಯರು ಸರ್ಕಾರಕ್ಕೆ ಕೇಳಿಕೊಂಡರು. ಇದಕ್ಕೆ ಪೂರಕವಾಗಿ ಧಾರವಾಡದ ಟೀಚರ್ಸ್ ಟ್ರೇನಿಂಗ್ ಕಾಲೇಜಿಗೆ ಲಗ್ಗೆ ಹಾಕಿ, ಆ ಕಾಲೇಜಿನಲ್ಲಿ ಇಂತಿಷ್ಟು ಪ್ರಮಾಣ ದಲಿತ ವಿದ್ಯಾರ್ಥಿಗಳಿಗೆ ಮೀಸಲಿರಬೇಕೆಂದು ಸರ್ಕಾರಕ್ಕೆ ಬೇಡಿಕೆ ಮಂಡಿಸಿದರು. ಜೊತೆಗೆ ದಲಿತ ವಿದ್ಯಾರ್ಥಿಗಳಿಗೆ ಸ್ಕಾಲರ್‌ಶಿಪ್ ಹಾಗೂ ಉಚಿತ ಬೋರ್ಡಿಂಗ್ ನೀಡಬೇಕೆಂದೂ ಒತ್ತಾಯ ತಂದರು. ದೇವರಾಯರ ಟ್ರೇನಿಂಗ್ ಕಾಲೇಜು ಮೀಸಲಾತಿ ಬೇಡಿಕೆಯನ್ನು ಸರ್ಕಾರ ಭಾಗಶಃ ಒಪ್ಪಿಕೊಂಡು ಜಾರಿಗೆ ತಂದಿತು. ಅದರ ಪರಿಣಾಮವಾಗಿ ನೂರಾರು ದಲಿತರು ಟ್ರೇನಿಂಗ್ ಕಾಲೇಜು ಸೇರಿ ಶಿಕ್ಷಕರಾಗಿ ಹೊರಗೆ ಬಂದರು. ಈ ಶಿಕ್ಷಕರಿಗೆ ಸಾವಿರಾರು ದಲಿತ ವಿದ್ಯಾರ್ಥಿಗಳಿಗೆ ಅಕ್ಷರಜ್ಞಾನ ಕೊಡಲು ಮುಂದಾದರು. ದೇವರಾಯರು ಹೆಗಲಿಗೆ ಜೋಳಿಗೆ ಹಾಕಿ ಜನರಿಂದ ಹಣ ಹಾಗೂ ಕಾಳುಕಡ್ಡಿಯನ್ನು ಸಂಗ್ರಹಿಸಿ ಬೋರ್ಡಿಂಗ್‌ಗೆ ತಂದು ಸುರಿದದ್ದೂ ಉಂಟು. ಹಲವಾರು ಜನರಿಗೆ ಉನ್ನತ ಶಿಕ್ಷಣಕ್ಕೆ ಸಹಾಯ ಮಾಡಿ ಪ್ರೋತ್ಸಾಹಿಸಿದ್ದೂ ಇದೆ.

ಶಿಕ್ಷಣವಿಲ್ಲದ್ದರಿಂದ ದಲಿತರು ಮೂಢನಂಬಿಕೆಗಳಿಗೆ ಬಲಿಯಾಗಿದ್ದರು. ಶಿಕ್ಷಣ ಪ್ರಸಾರದ ಜೊತೆಗೆ ಮೂಢನಂಬಿಕೆಗಳಿಗೆ ತಿಲಾಂಜಲಿ ಇಡುವುದೂ ದೇವರಾಯರ ನಿರ್ಧಾರವಾಗಿತ್ತು. ಅದಕ್ಕಾಗಿ ಅವರು ನಾಟಕಗಳ ಮೂಲಕ ಜನರನ್ನು ತಲುಪಲು ಪ್ರಯತ್ನಿಸಿದರು. ಇದರ ಪರಿಣಾಮವಾಗಿ ಕ್ರಿ.ಶ. 1918 ರಲ್ಲಿ 'ಕರ್ನಾಟಕ ಬಹಿಷ್ಕೃತ ಬೋಧಿನಿ' ಎಂಬ ತಂಡ ಹುಟ್ಟಿಕೊಂಡಿತು. ಅದು ತನ್ನ ಮೊದಲ ಕೃತಿಯಾಗಿ 'ಕರ್ನಾಟಕ ಬಹಿಷ್ಕೃತ ಬೋಧಿನಿ ಅರ್ಥಾತ್ ಯಲ್ಲಮ್ಮ' ಎಂಬ ನಾಟಕವನ್ನು ರಂಗಕ್ಕೆ ತಂದಿತು. ನಾಟಕದ ವಸ್ತು ದೇವದಾಸಿ ಪದ್ಧತಿಯ ವಿರೋಧವಾಗಿತ್ತು. ನಂತರದಲ್ಲಿ 'ರೈತನ ಮಗಳು', 'ಸೂಳೆಯ ಮಗಳು' ಇತ್ಯಾದಿ ನಾಟಕಗಳನ್ನು ಊರೂರು ಅಲೆದಾಡಿ ನೂರಾರು ಪ್ರಯೋಗಗಳನ್ನು ಮಾಡಿದರು. ನಾಟಕಗಳಿಂದ ನಿರೀಕ್ಷಿತ ಪರಿಣಾಮವೇ ಉಂಟಾಗಿತ್ತು. ದಲಿತರಲ್ಲಿ ವೈಚಾರಿಕ ಸಂಘರ್ಷ ಮೂಡುವಂತೆ ದೇವರಾಯರು ಯತ್ನಿಸಿದ್ದರು. ಆಗಿನ ಬೆಳಗಾವಿ ಭಾಗ ಕನ್ನಡ ಮರಾಠಿಯಾಗಿದ್ದರಿಂದ ಎರಡೂ ಭಾಷೆಗಳಲ್ಲಿ ವಿಫುಲವಾಗಿ ಅವರು ಹಾಡುಗಳನ್ನು ರಚಿಸಿದರು. ತಮ್ಮ ಕವಿತೆ ಮತ್ತು ಹಾಡುಗಳಲ್ಲಿ ಅವರು ಸಮಾಜದಲ್ಲಿರುವ ಅನಿಷ್ಟ ಪದ್ಧತಿಗಳನ್ನು ವಿರೋಧಿಸುತ್ತಿದ್ದರು. ಅವರ ಇಂಥ ವಿಚಾರಗಳಿಂದ ಪ್ರೇರಿತರಾಗಿ ಅನೇಕ ದೇವದಾಸಿಯರು ವಿವಾಹವಾಗಲು ಮುಂದೆ ಬಂದರು. ಇಂಥ ಬದಲಾವಣೆಗಳು ದೇವರಾಯರ ಪ್ರಯತ್ನಕ್ಕೆ ಸಂದ ಜಯ ಆಗಿದ್ದವು.

**ದೇವರಾಯರ ಆರ್ಥಿಕ ಸುಧಾರಣಾ ಹೋರಾಟ**

ದಲಿತರು ತಮ್ಮ ಉಪಜೀವನಕ್ಕಾಗಿ ಮೇಲ್ವರ್ಗದವರನ್ನೇ ಹೆಚ್ಚಾಗಿ ಅವಲಂಬಿಸಿದ್ದರು. ಇದು ಮೇಲ್ವರ್ಗದವರು ದಲಿತರ ಮೇಲೆ ಪ್ರಾಬಲ್ಯ ಹೊಂದಲು ಕಾರಣವಾಗಿತ್ತು. ಆದಾಯವಿಲ್ಲದೇ ದುಡಿಯುವುದು ದಲಿತರಿಗೆ ಅನಿವಾರ್ಯವಾಗಿತ್ತು. ಕ್ರಿಶ. 1874ರ ಕಾಯ್ದೆಯನ್ನು ಮುಂದಿಟ್ಟುಕೊಂಡು ಕ್ರಿ.ಶ. 1927 ರಲ್ಲಿ ಕರ್ನಾಟಕದಲ್ಲಿ ಮೊದಲ ಬಾರಿಗೆ ದೇವರಾಯರು ಇಂಥ ಪದ್ಧತಿಯನ್ನು ವಿರೋಧಿಸಿದರು. ದಲಿತರ ಶ್ರಮಕ್ಕೆ ತಕ್ಕ ಆದಾಯವನ್ನು ನೀಡಬೇಕೆಂದು ಆಗ್ರಹಿಸಿದರು. ಜುಲೈ 27, 1943 ರಂದು ಈ ಹಿಂದೆ ದಲಿತರಿಗೆ ನೀಡಿದ್ದ ವ್ಯವಸಾಯ ವತನಿ ಭೂಮಿಯನ್ನು ವಾಪಸ್ ಪಡೆಯುವಂತೆ ಮುಂಬೈ ಸರ್ಕಾರ ಆಜ್ಞೆ ನೀಡಿತು. ಇದನ್ನು ಅಂಬೇಡ್ಕರರು ಕಟುವಾಗಿ ವಿರೋಧಿಸಿದರು. ಅದರ ಪ್ರತಿಕ್ರಿಯೆ ಎಲ್ಲೆಡೆ ಮೂಡಲಾರಂಭಿಸಿತು. ದೇವರಾಯರು ಮುಂಬೈಗೆ ಹೋಗಿ ಬಾಬಾಸಾಹೇಬರನ್ನು ಭೇಟಿಯಾಗಿ, ಆ ಆಜ್ಞೆಯ ಸಾಧಕ–ಬಾಧಕಗಳನ್ನು ಚರ್ಚಿಸಿದರು. ಆ ಆಜ್ಞೆಯನ್ನು ಧಿಕ್ಕರಿಸಬೇಕೆಂದು ಬಾಬಾಸಾಹೇಬರು ನಿರ್ಧರಿಸಿದರು. ದೇಶಾದ್ಯಂತ ದಲಿತ ಪ್ರತಿಭಟನೆಗಳು ನಡೆದವು. ದೇವರಾಯರೂ ಬೆಳಗಾವಿ ಜಿಲ್ಲೆಯ ಕಾಗವಾಡದಲ್ಲಿ ಜುಲೈ 24, 1945 ರಲ್ಲಿ ದಲಿತರ ಒಂದು ಬೃಹತ್ತಾದ ಸಭೆಯನ್ನು ಸಂಘಟಿಸಿದರು. ಆ ಕಾರಣಕ್ಕಾಗಿ ಅವರು ಇಡೀ ಜಿಲ್ಲೆ ಮತ್ತು ದಕ್ಷಿಣ ಮಹಾರಾಷ್ಟ್ರ ಅಡ್ಡಾಡಬೇಕಾಯಿತು. ಕೊಲ್ಹಾಪುರದಿಂದ ಶಾಹು ಛತ್ರಪತಿ ಮಹಾರಾಜರನ್ನು ಅವರು ಭೇಟಿಯಾದರು. ಅವರು ಸಮ್ಮೇಳನಕ್ಕಾಗಿ ದೇವರಾಯರಿಗೆ ಹಣವನ್ನು, ಮಾರ್ಗದರ್ಶನವನ್ನೂ ನೀಡಿದರು.

ಸೆಪ್ಟೆಂಬರ್ 22, 1945 ರಲ್ಲಿ ದೇವರಾಯರು ಮಹಾರ್ ವತನದಾರ್ ಪರಿಷತ್ತನ್ನು ಆಯೋಜಿಸಿದರು. ಈ ಸಭೆಯ ಅಧ್ಯಕ್ಷತೆಯನ್ನು ವಹಿಸಿದವರು ಬ್ಯಾರಿಸ್ಟರ್ ಎಸ್.ಎನ್.ಮಾನೆ ಸಭೆಯಲ್ಲಿ ಗೊತ್ತುವಳಿಯೊಂದನ್ನು ಪಾಸು ಮಾಡಿ ಕಲೆಕ್ಟರಿಗೆ ಕಳುಹಿಸಿಕೊಟ್ಟಿತು.

ದೇವರಾಯರು ಸಹಕಾರಿ ತತ್ವದ ಸೊಸೈಟಿಯನ್ನು ಆರಂಭಿಸಿ, ಅದರಲ್ಲಿ ದಲಿತರನ್ನೆಲ್ಲ ಸದಸ್ಯರನ್ನಾಗಿ ಮಾಡಿಕೊಂಡು, ಎಲ್ಲ ಜನರ ಸಹಿ ಹಾಕಿಸಿ, ಕಲೆಕ್ಟರರಿಗೆ ನೀಡಿದರು. ದೇವರಾಯರ ಬಗೆಗೆ ಮೆಚ್ಚುಗೆ ಇದ್ದ ಕಲೆಕ್ಟರರು ಐನಾಪೂರ ಮತ್ತು ಅಥಣಿ ಭಾಗಗಳಲ್ಲಿಯ ದಲಿತರಿಗಾಗಿ 400 ಎಕರೆ ಸಾಗುವಳಿ ಭೂಮಿಯನ್ನು ಮಂಜೂರು ಮಾಡಿದರು. ಅದನ್ನು ಸರ್ಕಾರಿ ಪಡಬಿದ್ದ ಭೂಮಿಯ ಪರಭಾರೆಯನ್ವಯ ರೈತರಿಗೆ ನೀಡುತ್ತಿರುವುದಾಗಿ ಕಲೆಕ್ಟರ ತಮ್ಮ ಆದೇಶದಲ್ಲಿ ಹೇಳಿದರು. 'ವತನಿ ಭೂಮಿ ಸ್ವಾಧೀನ'ದ ಸರ್ಕಾರದ ಆಜ್ಞೆಗೆ ಅಭೂತಪೂರ್ವ ವಿರೋಧವಾಗಿದ್ದರಿಂದ ಸರ್ಕಾರ ಆಜ್ಞೆಯನ್ನು ವಾಪಸ್ಸು ಪಡೆಯಿತು. ದಲಿತರ ಭೂಮಿ ದಲಿತರಿಗೆ ಉಳಿದವು. ದೇವರಾಯರು ಈ ಸಮಸ್ಯೆ ನಿವಾರಣೆಯ ನಿಟ್ಟುಸಿರುಬಿಟ್ಟರು.

**ರಾಜಕೀಯ ಸುಧಾರಣಾ ಚಳುವಳಿ**

ರಾಜಕೀಯ ಪ್ರಜ್ಞೆಯೂ ದೇವರಾಯರಲ್ಲಿ ಸಾಕಷ್ಟಿತ್ತು. ಕ್ರಿ.ಶ. 1924 ರಲ್ಲಿ ಬೆಳಗಾವಿಯಲ್ಲಿ ನಡೆದ ಕಾಂಗ್ರೆಸ್ ಅಧಿವೇಶನದಲ್ಲಿ ಅಂಬೇಡ್ಕರ ಅವರನ್ನು ಅವಮಾನಿಸಲಾಯಿತೆಂಬ ಕಾರಣಕ್ಕೆ ದೇವರಾಯರು ಪಿಂಪಳಕಟ್ಟಾದಲ್ಲಿ ಅಂಬೇಡ್ಕರ ಅವರಿಗೆ ದಲಿತರನ್ನುದ್ದೇಶಿಸಿ ಭಾಷಣ ಮಾಡಲು ಕಾರ್ಯಕ್ರಮವನ್ನು ಆಯೋಜಿಸಲು ಬಹಳ ಶ್ರಮಪಟ್ಟರು. ಇದಾದ ನಂತರ ಅಂಬೇಡ್ಕರರು ಬೆಳಗಾವಿ ಜಿಲ್ಲೆಯ ಬೇರೆ ಬೇರೆ ಕಡೆಗಳಲ್ಲಿ ಸಂಚಾರ ಕೈಗೊಂಡು ದಲಿತರನ್ನುದ್ದೇಶಿಸಿ ಭಾಷಣ ಮಾಡಿದರು. ಅವರ ಆ ಸಂಚಾರದಲ್ಲಿ ದೇವರಾಯರು ಅವರ ಜೊತೆಗಿದ್ದರು. ಅಂಬೇಡ್ಕರ ಬಗ್ಗೆ ಅಪಾರ ಅಭಿಮಾನ, ಪ್ರೀತಿ ಹೊಂದಿದ್ದ ದೇವರಾಯರು ನಿಪ್ಪಾಣಿಯಲ್ಲಿ ಬೃಹತ್ ಸಭೆಯನ್ನು ಆಯೋಜಿಸಿದರು. ನವೆಂಬರ್ 11 ಮತ್ತು 12, 1925 ರಲ್ಲಿ 'ಬಹಿಷ್ಕೃತ ಹಿತಕಾರಣಿ' ಎಂಬ ಎರಡು ದಿನಗಳ ಸಮ್ಮೇಳನವನ್ನು ದೇವರಾಯರು ಬೆಳಗಾವಿಯಲ್ಲಿ ಆಯೋಜಿಸಿದರು. ಈ ಸಭೆಯ ಅಧ್ಯಕ್ಷತೆಯನ್ನು ಡಾ. ಅಂಬೇಡ್ಕರರೇ ವಹಿಸಿದ್ದರು. ಹೀಗೆ ಕಾಲಕಾಲಕ್ಕೆ ಅಂಬೇಡ್ಕರರನ್ನು ದೇವರಾಯರು ಬೆಳಗಾವಿ, ನಿಪ್ಪಾಣಿ, ಚಿಕ್ಕೋಡಿ, ಅಥಣಿ ಮುಂತಾದ ಊರುಗಳಲ್ಲಿ ಸಮ್ಮೇಳನಗಳನ್ನು ಆಯೋಜಿಸಿ ಕರೆಸಿದರು.

ಸಪ್ಟೆಂಬರ್ 29, 1926 ರಂದು ಕಾಗವಾಡದಲ್ಲಿ ನಡೆದ ಬೃಹತ್ ದಲಿತ ಸಮ್ಮೇಳನದಲ್ಲಿ ದೇವರಾಯರ ಸಾಧನೆಯನ್ನು ಗುರುತಿಸಿ ಅಭಿನಂದಿಸಲಾಯಿತು. ಕ್ರಿ.ಶ. 1927 ರಲ್ಲಿ ಸರ್ಕಾರ ದೇವರಾಯರನ್ನು ಬೆಳಗಾವಿ ಜಿಲ್ಲೆ ಸ್ಕೂಲ್ ಬೋರ್ಡ್ ಸದಸ್ಯನೆಂದು ನೇಮಿಸಿತು. ಇದು ದಲಿತ ಸಮಾಜಕ್ಕೆ ಸರ್ಕಾರ ನೀಡಿದ ದೊಡ್ಡ ಗೌರವವಾಗಿತ್ತು. ಅದೇ ವರ್ಷ ಹುಕ್ಕೇರಿಯಲ್ಲಿ ದೇವರಾಯರನ್ನು ಅಭಿನಂದಿಸಲೆಂದು ಕರೆದ ಸಭೆಯಲ್ಲಿ ದಲಿತ ಮಕ್ಕಳಿಗೆ ಸರ್ಕಾರ ಕಡ್ಡಾಯವಾಗಿ ಶಿಕ್ಷಣ ನೀಡಬೇಕು ದೇವರಾಯರು ಪ್ರತಿಪಾದಿಸಿದರು. ಧಾರವಾಡದ ಟ್ರೇನಿಂಗ್ ಕಾಲೇಜಿನಲ್ಲಿ ಪ್ರತಿ ಜಿಲ್ಲೆಯ 10 ದಲಿತ ವಿದ್ಯಾರ್ಥಿಗಳಿಗೆ ಪ್ರವೇಶ ನೀಡಬೇಕೆಂದೂ, ಸರ್ಕಾರಿ ಅರಣ್ಯಗಳಲ್ಲಿ ಮತ್ತು ಬೀಳು ಬಿದ್ದ ಸರ್ಕಾರಿ ಜಮೀನುಗಳನ್ನು ದಲಿತರಿಗೆ ಸಾಗುವಳಿಗಾಗಿ ನೀಡಬೇಕು ಮತ್ತು ಸಾರ್ವಜನಿಕ ಹಿಂದೂ ದೇವಸ್ಥಾನಗಳಲ್ಲಿ

ದಲಿತರಿಗೆ ಇತರ ಜಾತಿಯವರಂತೆ ಮುಕ್ತ ಪ್ರವೇಶ ನೀಡಬೇಕು ಹಾಗೂ ಸಾರ್ವಜನಿಕ ಬಾವಿಗಳಲ್ಲಿ ನೀರು ಸೇದುವ ಹಕ್ಕು ದಲಿತರಿಗೂ ಇರಬೇಕೆಂದು ದೇವರಾಯರು ಹೇಳಿದರು. ಸರ್ಕಾರ ಮುಸಲ್ಮಾನರಿಗೆ ನೀಡಿದಂತೆ ಪ್ರತ್ಯೇಕವಾದಮತದಾರ ಸಂಘ, ದಲಿತರಿಗೂ ಸಿಗಬೇಕೆಂಬ ವಿಚಾರವನ್ನುಅಲ್ಲಿ ಮಂಡಿಸಿದರು. ದೇವರಾಯರು ಕ್ರಿ.ಶ. 1927ರಲ್ಲಿ ಭಾರತೀಯ ಬಹಿಷ್ಕೃತ ಸಮಾಜ ಶಿಕ್ಷಣ ಪ್ರಸಾರಕ ಮಂಡಳಿ (Depressed Classes Education Society) ಎಂಬ ಸಂಸ್ಥೆಯನ್ನು ಹುಟ್ಟು ಹಾಕಿದರು. ಅದರ ಮೊದಲ ಸಭೆ ಮೇ 15, 1927ರಲ್ಲಿ ಗವನಾಳ ಗ್ರಾಮದಲ್ಲಿ ಜರುಗಿತು. ಚಿಕ್ಕೋಡಿ ತಾಲೂಕಿನ ಮತ್ತು ದಕ್ಷಿಣ ಮಹಾರಾಷ್ಟ್ರದಿಂದ ಅನೇಕ ಜನರು ಈ ಸಭೆಗೆ ಹಾಜರಾಗಿದ್ದರು.

1927 ರಲ್ಲಿ ಬೆಳಗಾವಿ ಜಿಲ್ಲಾ ವತನದಾರ್ ಮಹಾರ್ ಸಂಘವೆಂಬ ಇನ್ನೊಂದು ಸಂಸ್ಥೆಯನ್ನು ದೇವರಾಯರು ಆರಂಭಿಸಿದರು. ಈ ಎರಡೂ ಸಂಘಗಳನ್ನು ರಿಜಿಸ್ಟರ್ ಮಾಡಿಸಲಾಗಿತ್ತು. ದಲಿತರನ್ನು ಸಂಘಟಿಸಿ ಅವರ ಆರ್ಥಿಕ, ಸಾಮಾಜಿಕ, ಶೈಕ್ಷಣಿಕ ಮತ್ತು ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸುವುದು ಈ ಎರಡೂ ಸಂಘಗಳ ಉದ್ದೇಶವಾಗಿತ್ತು. ತಮ್ಮ ಸಂಘದ ಧ್ಯೇಯೋದ್ದೇಶಗಳನ್ನು ಕಾಲಕಾಲಕ್ಕೆ ದೇವರಾಯರು ಬಾಬಾ ಸಾಹೇಬರಿಗೆ ತಿಳಿಸುತ್ತಿದ್ದರು. ಅವರಿಂದ ಪ್ರೋತ್ಸಾಹಕರ ಪ್ರತಿಕ್ರಿಯೆಯೂ ಬರುತ್ತಿತ್ತು. ಮಾರ್ಚ್ 23, 1929 ರಂದು ಬೆಳಗಾವಿ ಜಿಲ್ಲೆ ಬಹಿಷ್ಕೃತ ಸಾಮಾಜಿಕ ಪರಿಷತ್ತಿನ ಮೊದಲ ಅಧಿವೇಶನವನ್ನು ಬೆಳಗಾವಿಯಲ್ಲಿ ಆಯೋಜಿಸಲಾಯಿತು. ಈ ಅಧಿವೇಶನದ ಸ್ವಾಗತಾಧ್ಯಕ್ಷನಾಗಿ ದೇವರಾಯರು ಕೆಲಸ ಮಾಡಿದರು. ಈ ಅಧಿವೇಶನದಲ್ಲಿ ಡಾ. ಅಂಬೇಡ್ಕರ ಅವರನ್ನೊಳಗೊಂಡಂತೆ ಅನೇಕ ಸ್ತರದ ನಾಯಕರುಗಳು ಭಾಗವಹಿಸಿದ್ದರು. ಕ್ರಿ.ಶ. 1936 ರಲ್ಲಿ ಅಂಬೇಡ್ಕರರು 'ಸ್ವತಂತ್ರ ಮಜೂರ ಪಕ್ಷ'ವನ್ನು ಆರಂಭಿಸಿ ದೇವರಾಯರಿಗೆ ಚಿಕ್ಕೋಡಿ ಮತಕ್ಷೇತ್ರದಿಂದ ಸ್ಪರ್ಧಿಸಲು ಕೇಳಿದರು. ಆದರೆ ದೇವರಾಯರು ವರಾಳೆಯವರ ಹೆಸರನ್ನು ಚುನಾವಣೆಗೆ ಸೂಚಿಸಿ, ತಾವು ಅವರ ಬೆಂಗಾವಲಿಗಿರುವುದಾಗಿ ಸೂಚಿಸಿದರು. ಇದು ದೇವರಾಯರ ತತ್ವವಾಗಿತ್ತು. 1942 ರಲ್ಲಿ ಅವರ ವತನದಾರ ಮಹಾರ್ ಪರಿಷತ್ತಿನ ಎರಡು ಸಮ್ಮೇಳನಗಳನ್ನು ಸಂಘಟಿಸಿದರು. 1964 ಮೇ 27 ರಂದು ಉಗಾರಖುರ್ದದಲ್ಲಿ ಕರ್ನಾಟಕ ಹರಿಜನ ಪರಿಷತ್ ಎಂಬ ಅಧಿವೇಶನ ಏರ್ಪಡಿಸಿದ್ದರು. ಅವರು ತಮ್ಮ ಎಲ್ಲ ಸಮಾವೇಶಗಳಲ್ಲಿಯೂ ಸಮಸ್ತ ದಲಿತರು ಒಳಗೊಳ್ಳುವಂತೆ ಕಾರ್ಯಕ್ರಮ ರೂಪಿಸುತ್ತಿದ್ದರು.

ಇಂಥ ಸಂಘಟನೆಗಳ, ಜವಾಬ್ದಾರಿಯುತ ಸಂದರ್ಭಗಳಲ್ಲಿಯೂ ದೇವರಾಯರು ಒಮ್ಮೆ ದಾರಿ ತಪ್ಪಿದ್ದುಂಟು. ಇಂಗ್ಲೆಂಡ ಮೂಲದ 'ಮನಿರೇನ್ ಕಂಪನಿ'ಯ ಬೆಳಗಾವಿ ಜಿಲ್ಲೆಯ ಏಜೆಂಟರಾಗಿ ನೇಮಕಗೊಂಡ ದೇವರಾಯರು, ತಾವು ಮಾಡುತ್ತಿರುವ ಏಜೆಂಟಗಿರಿ ತಪ್ಪು ಎಂಬ ಅಂತರಾತ್ಮದ ಕರೆಗೆ ಓಗೊಟ್ಟರೂ, ಜನರ ಕಂಪ್ಲೆಂಟ ಆಧಾರದ ಮೇಲೆ ದೇವರಾಯರ ಮೇಲೆ ಸರ್ಚ್‌ವಾರಂಟ್ ಹೊರಡಿಸಲಾಗಿತ್ತು. ಬೀಸುವ ದೊಣ್ಣೆ ತಪ್ಪಿದರೆ ನೂರು ವರ್ಷ ಆಯುಷ್ಯವೆಂದು ತಿಳಿದ ದೇವರಾಯರು ಶಿಕ್ಷೆಯಿಂದ ಪಾರಾಗಲು ಕ್ರಿಶ್ಚಿಯನ್ ಧರ್ಮಕ್ಕೆ ಮತಾಂತರ ಹೊಂದಿದರು (ಕ್ರಿ.ಶ. 1935 ರಲ್ಲಿ). ಮುಂದೆ 1939 ರಲ್ಲಿ ದೇವರಾಯರ ಮೇಲಿನ ಖಟ್ಲೆಯನ್ನು ಸರ್ಕಾರ ವಾಪಸ್ಸು ಪಡೆಯುತ್ತಿದ್ದಂತೆಯೇ ದೇವರಾಯರು ಆ ಧರ್ಮವನ್ನು ತ್ಯಜಿಸಿದರು.

ಹೀಗೆ ದೇವರಾಯರ ಬದುಕಿನುದ್ದಕ್ಕೂ ಚಳುವಳಿಯಲ್ಲಿ ತೊಡಗಿಸಿಕೊಂಡಿದ್ದರಿಂದ ಬೆಳಗಾವಿ ಭಾಗದಲ್ಲಿ ಶೈಕ್ಷಣಿಕವಾಗಿ, ಸಾಮಾಜಿಕವಾಗಿ, ಆರ್ಥಿಕವಾಗಿ ಹಾಗೂ ರಾಜಕೀಯವಾಗಿ ಬಹಳಷ್ಟು ಕ್ರಾಂತಿಯಾಗಿತ್ತು. ದಲಿತರಿಗಾಗಿ ಲೋಕಸಭಾ ಮತ್ತು ವಿಧಾನಸಭಾ ಕ್ಷೇತ್ರವನ್ನು ಮೀಸಲಾಗಿರಿಸಿತ್ತು. ಇವರ ಗರಡಿಯಲ್ಲಿ ಪಳಗಿದ ಅನೇಕರು ರಾಜಕೀಯ ನಾಯಕರಾಗಿ ರೂಪುಗೊಂಡಿದ್ದರು. ದಲಿತರೂ ತಮ್ಮ ಹಕ್ಕುಗಳಿಗಾಗಿ ಪ್ರತಿಭಟಿಸಲು ಕಲಿತರು. ಅವರಿಗಾಗಿಯೇ ಅನೇಕ ಕಾಯ್ದೆಗಳು ರೂಪುಗೊಂಡವು. ದಲಿತರು ಗುಡಿಗಳಿಗೆ ಹೋಗಿ ಬರಬಹುದಾಗಿತ್ತು. ಸಾರ್ವಜನಿಕ ಬಾವಿಗಳಿಂದ ನೀರನ್ನು ಸೇದಬಹುದಾಗಿತ್ತು. ಈ ಎಲ್ಲ ಬದಲಾವಣೆಗಳನ್ನು ದೇವರಾಯರು ಕಂಡು ಸಂತಸಪಟ್ಟಿದ್ದೂ ಉಂಟು. ಹೀಗೆ ಇಡೀ ಆಯುಷ್ಯವನ್ನು ದಲಿತ ಸಮಾಜದ ಏಳಿಗೆಗಾಗಿ ಮೀಸಲಿರಿಸಿದ ದೇವರಾಯರು ಕ್ರಿ.ಶ 1972 ರಲ್ಲಿ ಅಸ್ತಂಗತರಾದರು.

**ಉಪಸಂಹಾರ**

ದೇವರಾಯರ ಸಮಕಾಲೀನ ಸಮಯದಲ್ಲಿ ಕಾಂಗ್ರೆಸ್‌ನಿಂದ ದೂರವಿದ್ದು, ವೈಯಕ್ತಿಕವಾಗಿ ಚಳುವಳಿಯಲ್ಲಿ ತೊಡಗಿಸಿಕೊಳ್ಳುವುದೆಂದರೆ ನದಿಯ ಹರಿವಿನ ವಿರುದ್ಧ ಈಜುವ ಧೈರ್ಯ ತೋರಿದಂತೆಯೇ ಸರಿ. ಆದರೂ ಅವರ ಈ ಸ್ವಭಾವ ದಲಿತರ ಬಗೆಗಿನ ಅವರ ಕಾಳಜಿ ನಿಷ್ಕಲ್ಮಶ ಪ್ರೀತಿ, ಅವರ ಏಳಿಗೆಯ ಚಿಂತನೆಯನ್ನು ಪ್ರತಿನಿಧಿಸುತ್ತದೆ. ಹೀಗಾಗಿ ಕರ್ನಾಟಕದ ದಲಿತ ಇತಿಹಾಸದಲ್ಲಿ ಅಂಬೇಡ್ಕರರಿಗಿಂತ ಮುಂಚೆ ಶ್ರೀ ದೇವರಾಯ ಇಂಗಳೆಯವರ ಹೆಸರು ಉಲ್ಲೇಖವಾದರೆ ಆಶ್ಚರ್ಯಪಡಬೇಕಾಗಿಲ್ಲ.

**ಪರಾಮರ್ಶನಾ ಗ್ರಂಥಗಳು**


- ಕಲ್ಲೋಳಿಕರ ಎಸ್.ಕೆ. ಮತ್ತು ಎಂ.ಎಸ್. ಯಾದವ್. (1992). ದೇವರಾಯ ಇಂಗಳೆಯವರ ಸಾಮಾಜಿಕ ವಿಚಾರಗಳು. ಕರ್ನಾಟಕ ಭಾರತಿ, ಸಂ. 1(4).
- ಜಗದೀಶ ಜಿ. ಕಿವುಡನವರ. (1998). ಬೆಳಗಾಂವ ಜಿಲ್ಲೆಯಲ್ಲಿ ಡಾ. ಬಿ.ಆರ್. ಅಂಬೇಡ್ಕರ ಅವರ ಅನುಯಾಯಿಗಳು : ಒಂದು ಅಧ್ಯಯನ. ಅಪ್ರಕಟಿತ ಎಂ.ಫಿಲ್. ಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಧಾರವಾಡ.
- ತುಳಜಾಬಾಯಿ ಎನ್. ರಜಪೂತ. (1996). ಬೆಳಗಾವಿ ಜಿಲ್ಲೆಯ ದಲಿತ ಚಳುವಳಿ: ಒಂದು ಅಧ್ಯಯನ. ಅಪ್ರಕಟಿತ ಎಂ.ಫಿಲ್. ಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಧಾರವಾಡ.
- ತೆಲಗಾವಿ ಲಕ್ಷ್ಮಣ. (2009) ಹಿಂದುಳಿದ ವರ್ಗಗಳು ಮತ್ತು ದಲಿತ ಚಳುವಳಿಗಳು. ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
- ಸರಜೂ ಕಾಟ್ಕರ. (2002). ದೇವರಾಯ. ಬೆಳಗಾವಿ
- Koligudde C.N. (2000). Karnatak Dalitapitamaha Devaray Ingle Man and Mission. Unpublished Dissertation, Karnatak University, Dharwad.
- Police Patil P.A. (1977). Political Sociology of Bombay Karnataka. Unpublished Ph.D. Thesis, Karnatak University, Dharwad.